ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 7ರವರೆಗೆ ಎರಡೂ ಸೇರಿದಂತೆ

ಅಧ್ಯಕ್ಷರು : "ಖಂಡ 2 ರಿಂದ 7ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 7ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘಶೀರ್ಷಿಕೆ ಪ್ರಸ್ತಾವನೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ``1997ನೇ ಸಾಲಿನ ಕೃಷಿ ಉತ್ಪನ್ನಗಳ ಮಾರುಕಟ್ಟೆ ವ್ಯವಹಾರಗಳ ನಿಯಂತ್ರಣ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ"

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ``1997ನೇ ಸಾಲಿನ ಕೃಷಿ ಮಾರುಕಟ್ಟೆ ಉತ್ಪನ್ನಗಳ ವ್ಯವಹಾರಗಳ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಕೃಷಿ ಉತ್ಪನ್ನಗಳ ಮಾರುಕಟ್ಟೆ ನಿಯಂತ್ರಣ (ತಿದ್ದುಪಡಿ) ವಿಧೇಯಕ, 1998.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ``1998ನೇ ಸಾಲಿನ ಕೃಷಿ ಉತ್ಪನ್ನಗಳ ಮಾರುಕಟ್ಟೆ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು)

ಶ್ರೀ ಎಚ್. ನಾಗಪ್ಪ (ಕೃಷಿ ಮಾರುಕಟ್ಟೆಗಳ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಸಮಿತಿಯಲ್ಲಿ ನಾವು ಹೆಚ್ಚು ಶುಲ್ಕವನ್ನು ವಸೂಲಿ ಮಾಡಿ ಭಾರಿ ಮೊತ್ತದ ಸಾರ್ವಜನಿಕ ನಿಧಿ ಮಾರುಕಟ್ಟೆ

ಸಮಿತಿಗಳಲ್ಲಿ ನಿರ್ವಹಿಸುವುದರಿಂದಲೂ ಮತ್ತು ವಿವಿಧ ಅಭಿವೃದ್ಧಿ ಕಾರ್ಯಚಟುವಟಿಕೆಗಳು ಅಲ್ಲಿ ನಡೆಯುತ್ತಿರುವುದರಿಂದಲೂ ನಮ್ಮ ಸರ್ಕಾರ 3 ಜನ ನಿರ್ದೇಶಕರನ್ನು ನಾಮಕರಣ ಮಾಡಬೇಕೆನ್ನುವ ಒಂದು ತೀರ್ಮಾನವನ್ನು ಸರ್ಕಾರ ಈ ಹಿಂದೆ ತೆಗೆದುಕೊಂಡು ಒಂದು ಸುಗ್ರೀವಾಜ್ಞೆಯನ್ನು ಸಹ ಹೊರಡಿಸಿತು. ಆ ಸುಗ್ರೀವಾಜ್ಞೆಯನ್ನು ಹೈಕೋರ್ಟಿನಲ್ಲಿ ಚಾಲೆಂಜ್ ಮಾಡಿದ್ದರಿಂದ ಹಿಂದೆ ನಾವು ಏನು ವಿಧೇಯಕವನ್ನು ಮಂಡಿಸಿದ್ದೇವೋ ಅದನ್ನು ಪೂರ್ತಿ ಮಾಡುವುದಕ್ಕೆ ಆಗಲಿಲ್ಲ. ಅದು ಪುನಃ ನಮಗೆ ಹೈಕೋರ್ಟಿನಲ್ಲಿ ಮೊದಲನೆ ಬೆಂಚ್ನಲ್ಲಿ ವಿರುದ್ಧವಾಗಿ ಆಯಿತು. ಆ ನಂತರ ಫುಲ್ ಬೆಂಚ್‌ನಲ್ಲಿ ಆ ವಿಧೇಯಕವನ್ನು ಹೈಕೋರ್ಟ್ ಎತ್ತಿ ಹಿಡಿದು ನಾಮಕರಣ ಮಾಡುವಂತಹ ಒಂದು ಅಧಿಕಾರವನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದರಂತೆ ನಾವು ಮೂರು ಜನರನ್ನು ನಾಮಕರಣ ಮಾಡುವುದಕ್ಕೆ ಒಂದು ವಿಧೇಯಕವನ್ನು ತಂದಿದ್ದೇವೆ. ಇದನ್ನು ದಯಮಾಡಿ ತಾವು ಪಾಸ್ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಮಾನ್ಯಮಂತ್ರಿಗಳು ಏನು ಈ ಒಂದು ವಿಧೇಯಕವನ್ನು ಮಂಡಿಸಿದ್ದಾರೆ ಇದಕ್ಕೆ ಸಂಪೂರ್ಣವಾಗಿ ನಮ್ಮೆಲ್ಲರ ವಿರೋಧ ಇದೆ. ಏಕೆಂದರೆ ತಾವು ನಾಮಕರಣ ಪದ್ಧತಿಯನ್ನು ಕೈ ಬಿಡುತ್ತೇವೆಂದು ಹೇಳಿ, ಈಗಾಗಲೇ ಸಹಕಾರ ಮಂತ್ರಿಗಳು ಸಾಕಷ್ಟು ಸಾರಿ ಹೇಳುತ್ತಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಎಲ್ಲಿ ಹೆಚ್ಚು ಸರ್ಕಾರದ ಬಂಡವಾಳ ಇರುತ್ತದೆ ಮತ್ತು ಇಡೀ ಸಮಾಜಕ್ಕೆ ಆ ಒಂದು ಕಾನೂನಿನ ಪರಿಣಾಮವಾಗುತ್ತದೆ ಅಂತಹ ಕಡೆ ನಾಮಕರಣ ಮಾಡಬೇಕು ಸರ್ಕಾರದವರು ಅದನ್ನು ವಿರೋಧ ಮಾಡುತ್ತಾರೆ. ಇಲ್ಲಿ ನೇರವಾಗಿ ಎ ಪಿ ಎಂ ಸಿ ಗಳಲ್ಲಿ ಅಂತಹ ಯಾವುದೇ ಪ್ರಮೇಯ ಬರುವುದಿಲ್ಲ ಮತ್ತು ಚುನಾವಣೆಯು ಕೂಡ ಇಲ್ಲಿ ಮೀಸಲಾತಿಯ ಆಧಾರದ ಮೇಲೆಯೇ ನಡೆಯುತ್ತದೆ. ಎ ಪಿ ಎಂ ಸಿ ಗಳಲ್ಲಿ ಒಂದೊಂದು ಕ್ಷೇತ್ರಗಳಲ್ಲಿ ಮೀಸಲು ಇಟ್ಟಿದ್ದೀರಿ. ಮಹಿಳೆಯರಿಗೆ ಮೀಸಲು ಇಟ್ಟಿದ್ದೀರಿ. ಮೀಸಲಾತಿಯನ್ನು ಇಟ್ಟು ಮೀಸಲಾತಿಯ ಪ್ರಕಾರ ಚುನಾವಣೆ ನಡೆದರೂ ಕೂಡ ನಾಮಕರಣ ಮಾಡುವಂತಹ ಪ್ರಮೇಯ ಏನು ಇದೆ. ಇದನ್ನು ತಾವು ರಾಜಕೀಯ ದುರುದ್ದೇಶದಿಂದಲೇ ತಂದಿದ್ದೀರಿ. ನಾವು ಅನೇಕ ಸಾರಿ ಪ್ರತಿಭಟನೆಯನ್ನೂ ಸಹ ಮಾಡಿದ್ದೇವೆ. ಆಗ ತಾವೇನು ಮಾಡಿದಿರಿ ಸುಗ್ರೀವಾಜ್ಞೆಯನ್ನು ತಂದಿದ್ದೀರಿ. ಅದಕ್ಕೆ ಸ್ಪೇ ಆರ್ಡರ್ ತಂದರು ಅದನ್ನು ಮತ್ತೆ ಲ್ಯಾಪ್ಸ್ ಮಾಡಿದಿರಿ. ಪುನಃ ಸುಗ್ರೀವಾಜ್ಞೆಯನ್ನು ತಂದಿರಿ. ಸುಗ್ರೀವಾಜ್ಞೆಯನ್ನು ತಂದು ನಾಮಕರಣ ಮಾಡಿಕೊಂಡು ಎಲ್ಲಾ ಎ ಪಿ ಎಂ ಗಳನ್ನು ಕ್ಯಾಪ್ಚರ್ ಮಾಡುವಂತಹ ಕೆಲಸವನ್ನು ಮಾಡಿದಿರಿ. ಅಂದರೆ ಎಲ್ಲಿ ನಾಮಕರಣ ಅವಶ್ಯಕತೆ ಇಲ್ಲ ಅಲ್ಲಿ ನಾಮಕರಣ ಮಾಡುವುದಕ್ಕೆ ಪ್ರಾವಿಷನ್ ಮಾಡಿಕೊಳ್ಳುವುದು. ಎಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ನಾಮಿನೇಷನ್ ಇರಬೇಕು ಎಂದು ತೀಳಿದರೆ ಅಲ್ಲಿ ತೆಗೆದು ಹಾಕತಕ್ಕಂಥಾದ್ದನ್ನು ಮಾಡುತ್ತೀರಿ. ಹಾಗಾದರೆ ಇದು ಯಾವ ನ್ಯಾಯ? ಮಾನ್ಯ ಅಧ್ಯಕ್ಷರೇ, ಈ ಕಾನೂನುಗಳು ಸಮಾಜದಲ್ಲಿ ಪರಿವರ್ತನೆ ಮತ್ತು ಪರಿಣಾಮವನ್ನು ಮಾಡತಕ್ಕಂಥ ಕಾನೂನುಗಳು. ಇಂಥ ಕಾನೂನುಗಳ ಕಡೆಗೆ ಲಕ್ಷ್ಯ ಕೊಡದೇ ನೀವು ಮನಸ್ಸಿಗೆ ಬಂದ ಹಾಗೆ ನಾಮಿನೇಷನ್ ಮಾಡುತ್ತೇವೆ ಅಂದರೆ ಅದು ಸರಿ ಅಲ್ಲ. ಈ ನಾಮಿನೇಶನ್‌ನಲ್ಲಿಯೂ ಕೂಡ ಇವ್ಹೊತ್ತು ರಿಸರ್‌ವೇಷನ್ ಇಲ್ಲ. ನೀವು ನಿಮ್ಮ ಮನಸ್ಸಿಗೆ ಬಂದವರಿಗೆ ಯಾರಿಗಾದರೂ

ನಾಮಿನೇಷನ್ ಮಾಡಬಹುದು. ಈ ಮೂರು ನಾಮಿನೇಷನ್‌ನಲ್ಲಿ ಹಿಂದುಳಿದವರಿಗೆ, ಎಸ್‌ಸಿ, ಎಸ್‌ಟಿ ಯವರಿಗೆ ಎಂದು ನಿಗದಿ ಮಾಡಿದ್ದೀರಾ? ಇಲ್ಲ. ಅದಕ್ಕಾಗಿ ಕಾನೂನಿನಲ್ಲಿ ಪ್ರಾವಿಷನ್ ಇಲ್ಲ. ಅದು ನಿಮ್ಮ ಇಚ್ಛೆ ಪ್ರಕಾರ ಮಾಡಬಹುದು. ಸರಕಾರದವರು ತಮಗೆ ಇಷ್ಟ ಬಂದ ಹಾಗೆ ನಾಮಿನೇಷನ್ ಮಾಡಿಕೊಳ್ಳಬಹುದು. ಯಾವಾಗಲೂ ಒಂದು ಕಾನೂನು ಮಾಡಿದರೆ ಅದು ಶಾಶ್ವತವಾಗಿ ಇರುತ್ತದೆ. ನಾಳೆ ಬೇರೆ ಸರಕಾರ ಬರಬಹುದು. ಕಾನೂನು ಶಾಶ್ವತವಾಗಿರುವಂಥವುಗಳು ಸರಕಾರಗಳು ಬರುತ್ತವೆ, ಹೋಗುತ್ತವೆ. ಉದ್ದೇಶವು ಸಫಲವಾಗ ಬೇಕಾದರೆ ಕಾನೂನಿನಲ್ಲಿ ಅಳವಡಿಸಿ ಬೇಕಾಗುತ್ತದೆ. ಅದನ್ನು ಮಾಡದೆ ನಿಮಗೆ ಬೇಕಾದಂಥವರನ್ನು ನಾಮಿನೇಷನ್ ಮಾಡಲು ಮಾಡಿದ್ದೀರಿ. ಎರಡನೆಯದಾಗಿ, ಈ ಕ್ಲಾಸ್ ಅಮೆಂಡ್‌ಮೆಂಟ್ ತರತಕ್ಕಂಥ ಅವಶ್ಯಕತೆಯೇ ಇರಲಿಲ್ಲ. ಯಾಕೆಂದರೆ ಚುನಾವಣೆಯಲ್ಲಿಯೇ ಪ್ರಾವಿಷನ್ ಇದ್ದಾಗ ಯಾರಿಗೂ ಕೂಡ ನ್ಯಾಯ ಒದಗಿಸತಕ್ಕಂಥಾದ್ದು ಅಲ್ಲ. ಸೆಕ್ಷನ್-11 ಏನಿದೆ, ಅದಕ್ಕೆ ತಂದಂಥ ತಿದ್ದುಪಡಿ 9 ಸರಿ ಅಲ್ಲ. ಆದ್ದರಿಂದ ಇದು ಸಾಮಾಜಿಕ ನ್ಯಾಯ ಕೊಡತಕ್ಕಂಥಾದ್ದು ಅಲ್ಲ, ಸಮಾಜದ ದೃಷ್ಟಿಯಿಂದಲೂ ಒಳ್ಳೆಯದಲ್ಲ, ಕೇವಲ ಅಧಿಕಾರವನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳಬೇಕೆಂಬ ದೃಷ್ಟಿಯಿಂದಲೇ ಎಪಿಎಂಸಿ ಯಲ್ಲಿ ಮೂರು ನಾಮಿನೇಷನ್ ಮಾಡುತ್ತಾ ಇದ್ದೀರಿ. ಅದರಲ್ಲಿ ಇವೊತ್ತು ಬೇರೆ ಯಾರಿಗೂ ಅವಕಾಶ ಕೂಡ ಇಲ್ಲ. ಆದ್ದರಿಂದ ಸಾಮಾಜಿಕ ನ್ಯಾಯದ ವಿರುದ್ಧವಿರತಕ್ಕಂಥ ಕಾನೂನು. ಹಾಗೆಯೇ ಕಾನೂನನ್ನು ದುರುಪಯೋಗ ಮಾಡಿಕೊಳ್ಳಬೇಕೆಂಬ ದೃಷ್ಟಿಯಿಂದ ನಾಮಿನೇಷನ್ ಮಾಡಿ ಅನೇಕ ಕಡೆಗಳಲ್ಲಿ ನೀವು ಎಪಿಎಂಸಿಗಳನ್ನು ಹಿಡಿದಿಟ್ಟುಕೊಂಡಿದ್ದೀರಿ. ನಾಮಿನೇಷನ್ ಮೂಲಕ ಹಿಂದಿನ ಬಾಗಿಲಿನಿಂದ ಬರುವ ಪ್ರಯತ್ನವನ್ನು ಮಾಡಿದ್ದೀರಿ. ಅದಕ್ಕಾಗಿ ನಾನು ಇದನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಮತ್ತು ಸರಕಾರವು ಇದರಲ್ಲಿ ಆಸಕ್ತಿ ತೋರಿಸಿ ವಿಥ್‌ಡ್ರಾ ಮಾಡದಿದ್ದರೆ ನಾವು ಇದನ್ನು ಪ್ರತಿಭಟಿಸ ಬೇಕಾಗುತ್ತದೆ, ಎಂಬ ಮಾತನ್ನು ಹೇಳಬಯಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಇವರಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿಶ್ವಾಸವಿಲ್ಲವೇ? ಎಪಿಎಂಸಿಗಳಲ್ಲಿ ಜನರು ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಮಹಿಳೆಯರು, ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳು ಮುಂತಾಗಿ ಅಲ್ಲಿ ಚುನಾಯಿತ ಪ್ರತಿನಿಧಿಗಳೂ ಇರುತ್ತಾರೆ. ಅಲ್ಲಿರುವಂಥವರು ಯಾರಾದರೂ ಅಧ್ಯಕ್ಷರಾಗಿ ಅಲ್ಲಿನ ಪರಿಸ್ಥಿತಿಗೆ ತಕ್ಕಂತೆ ಕೆಲಸ ಮಾಡುವ ಪದ್ಧತಿ ಬರಬೇಕಾಗುತ್ತದೆ. ತಾವುಗಳು ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಯಾವ ಪಕ್ಷದ ಚಿಹ್ನೆಯೂ ಇರಬಾರದು ಎಂದು ಹೇಳುತ್ತೀರಿ. ಹೀಗೆ ಎಲ್ಲಾ ಕಡೆಗಳಲ್ಲಿಯೂ ರಾಜಕಾರಣ ಬರಬಾರದು. ಇವೊತ್ತು ನೀವು ಹಿಂಬಾಗಿಲಿನ ಮೂಲಕ ನಾಮಕರಣ ಮಾಡಿ ಯಾರೋ ನಿಮ್ಮ ಕಾರ್ಯಕರ್ತರನ್ನು ಕೂಡಿಸಿ, ಇಲ್ಲದ ರಾಜಕೀಯ ಮಾಡುವುದು ಸರಿ ಅಲ್ಲ. ಇದರ ಮೂಲಕ ಚುನಾಯಿತ ಪ್ರತಿನಿಧಿಗಳು ಕೆಲಸ ಮಾಡಲು ಅಡಿಪಡಿಸುವಂಥ ಪರಿಸ್ಥಿತಿಯನ್ನು ತಾವುಗಳು ತರುತ್ತೀದ್ದೀರಿ. ಪ್ರತಿಯೊಂದು ಕಡೆಯಲ್ಲಿಯೂ ಇಂಥ ಚಿಂತನೆಯನ್ನು ತಾವುಗಳು ಪ್ರಾರಂಭ ಮಾಡುತ್ತಿದ್ದೀರಿ. ನೇರವಾಗಿ ಜನರಿಂದ ಆಯ್ಕೆಯಾಗುವುದಿಲ್ಲ ಎಂದು ಮನದಟ್ಟಾದ ಮೇಲೆ ಈ ರೀತಿಯಲ್ಲಿ ನಾಮಿನೇಷನ್ ಮೂಲಕ ತರುವಂಥ ಕೆಟ್ಟ ಪದ್ಧತಿಯನ್ನು ತರುತ್ತಿದ್ದೀರಿ. ಇದೇ ಕಾರಣದಿಂದಾಗಿ

ಇರುವ ಪರಿಸ್ಥಿತಿಯನ್ನು ತಂದು ಬಿಟ್ಟಿದ್ದೀರಿ. ಮಾನ್ಯ ಸಹಕಾರ ಸಚಿವರು ಅನೇಕ ಸಮಾರಂಭಗಳಲ್ಲಿ ನನ್ನೊಂದಿಗೆ ಭಾಗವಹಿಸಿದ್ದಾಗ ಈ ಪದ್ಧತಿಯು ನನಗೆ ಇಚ್ಛೆ ಇಲ್ಲ ಎಂದು ಹೇಳಿದ್ದರು. ಮಾನ್ಯ ಸಚಿವರು ಅನುಭವಸ್ಥರು. ಅವರ ಮನಸ್ಸಿನಲ್ಲಿ ಏನಾದರೂ ಸುಧಾರಣೆ ಮಾಡಬೇಕೆಂಬ ಚಿಂತನೆ ಇದೆ. ಅದನ್ನು ತಾವುಗಳು ಸರಕಾರದ ಮೂಲಕ ಕಾರ್ಯರೂಪಕ್ಕೆ ತಾರದಿದ್ದರೆ, ನನ್ನ ಇಚ್ಛೆ ಇದ್ದರೂ ಸರಕಾರದ ತಾಳಕ್ಕೆ ತಕ್ಕ ಹಾಗೆ ಕುಣಿಯುತ್ತೇನೆ. ಎನ್ನುವುದಾದರೆ, ನಾವು ಯಾವುದೇ ಸಾಧನೆ ಮಾಡಿದಂತಾಗುವುದಿಲ್ಲ. ಆದ್ದರಿಂದ ತಾವುಗಳು ಈ ಕೆಟ್ಟ ಪದ್ಧತಿಯನ್ನು ತೆಗೆದುಹಾಕಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ನಾಮಕರಣದ ಮೂಲಕ ಪಕ್ಷದ ಕಾರ್ಯಕರ್ತರನ್ನು ಸಮಾಧಾನ ಮಾಡುವುದು ನಿಮ್ಮ ಉದ್ದೇಶ ಇರಬಹುದು. ಇದರ ಮೂಲಕ ಚುನಾಯಿತರು ಸ್ವತಂತ್ರರಾಗಿ ಕೆಲಸ ಮಾಡದೇ ಇರುವ, ಉಸಿರುಕಟ್ಟಿಸುವ ವಾತಾವರಣವನ್ನು ನಿರ್ಮಿಸುತ್ತಿರುವುದು ನಿಮಗೆ ಯಾರಿಗೂ ಒಳ್ಳೆಯ ಹೆಸರನ್ನು ತರುವುದಿಲ್ಲ, ನಿಮಗೆ ಇದು ಗೌರವ ತರುವುದಿಲ್ಲವಾದ ಕಾರಣ ದಯಮಾಡಿ ಈ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳಬೇಕು, ಇದರ ಮೂಲಕ ಒಂದು ಮೇಲ್ಪಂಕ್ತಿಯನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲವಾದರೆ ಇದರ ಮೂಲಕ ಎಲ್ಲಾ ಕಡೆಗಳಲ್ಲಿಯೂ ಈ ಕೆಟ್ಟ ಚಾಳಿ ಪ್ರಾರಂಭವಾಗುತ್ತದೆ. ಹೀಗೆ ನೀವು ಮಾಡಿದ್ದರೂ ಕೂಡ ನಿಮಗೆ ಜನರು ಮನ್ನಣೆ ಕೊಡಲಿಲ್ಲ. ಲೋಕಸಭಾ ಚುನಾವಣೆಯಲ್ಲಿ ನಿಮಗೆ ಒಳ್ಳೆಯದಾಗಲಿಲ್ಲ. ಯಾಕೆಂದರೆ ನಾವು ಇರುವ ಪದ್ಧತಿಯನ್ನು ಕುಲಗೆಡಿಸಿಬಿಟ್ಟರೆ ನಾಳೆ ಬಂದವರು ಅದನ್ನು ಸರಿಪಡಿಸಲು ಕಷ್ಟವಾಗುತ್ತದೆ. ಅವರೂ ಅದಕ್ಕೆ ಅಂಟಿಕೊಂಡು ಬಿಡುತ್ತಾರೆ. ಇದನ್ನು ವಾಪಸ್ ತೆಗೆದುಕೊಂಡು ಚರ್ಚೆ ಮಾಡಿ. ಈ ರೀತಿ ವಿರೋಧ ಪಕ್ಷದವರು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಈ ತರಹ ಮಾಡುವುದು ಬೇಡ. ಈಗಾಗಲೇ ನಮ್ಮ ಅಡ್ರೆಸ್ ಇಲ್ಲದ ಹಾಗೆ ಆಗಿದೆ. ಇನ್ನೂ ಆ ರೀತಿಯಲ್ಲಿ ಆಗುವುದು ಬೇಡ, ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು, ಸಹಕಾರ ಸಚಿವರು ಮುಂತಾಗಿ ಸೇರಿ ಚರ್ಚೆ ಮಾಡಿ ವಾಪಸ್ ಪಡೆಯಬೇಕೆಂಬ ಸಲಹೆಯನ್ನು ಕೊಡಬಯಸುತ್ತೇನೆ.

ಶ್ರೀ ಬಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಅಧ್ಯಕ್ಷರೇ, ನಾಮಿನೇಷನ್ಸ್ ಬಗ್ಗೆ ನಮ್ಮ ನಾಯಕರು ಮಾತನಾಡಿದ್ದಾರೆ. ಅದು ಸರಕಾರದ ನೀತಿ ಮತ್ತು ಕೋರ್ಟ್ ಕೂಡ ಅದರ ಬಗ್ಗೆ ಒಂದು ತೀರ್ಪನ್ನು ಕೊಟ್ಟಿದ್ದಾರೆ. ಎಪಿಎಂಸಿಗಳಲ್ಲಿ ಕೃಷಿಕರು, ಟ್ರೇಡರ್ಸ್ ಮತ್ತು ಸರ್ಕಾರದ ಕಡೆಯಿಂದ ನಾಮಿನೇಷನ್ಸ್ ಇರಬೇಕೆಂದು ಮಾಡಿದ್ದಾರೆ. ಅದರ ಜೊತೆಗೆ ಕೃಷಿ ಸಹಕಾರ ಸಂಸ್ಥೆಗಳು ಇದ್ದರೆ, ಅವುಗಳು ಡಿಫಂಕ್ಟ್ ಆಗದಿದ್ದರೆ ಅವರ ಕಡೆಯಿಂದ ಒಬ್ಬ ಸದಸ್ಯರನ್ನು ಚುನಾಯಿತರನ್ನಾಗಿ ಮಾಡಬೇಕೆಂದು ಒಂದು ಪ್ರಾವಿಷನ್ ಮಾಡಿದ್ದಾರೆ. ದುರಾದೃಷ್ಟವಶಾತ್ ಚುನಾಯಿತ ಸದಸ್ಯರನ್ನು ಪ್ರಾವಿಷನ್ ಮಾಡಿರುವ ಸರಕಾರ ಯಾವ ಅವಕಾಶವನ್ನು ಪಡೆದುಕೊಂಡು ನಾಮಿನೇಷನ್ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಅದರ ಜೊತೆಗೆ ಸಹಕಾರ ಸಂಸ್ಕರಣ ಸಂಸ್ಥೆಯವರೊಬ್ಬರನ್ನು ಸೇರಿಸಿ ಒಟ್ಟು ನಾಲ್ಕು ಜನ ನಾಮಿನೇಷನ್ ಮಾಡಿದ್ದಾರೆ. ಯಾವ ಅವಕಾಶದ ಅಡಿಯಲ್ಲಿ ಹೀಗೆ ಮಾಡಿದ್ದಾರೆ ಎಂಬ ಬಗ್ಗೆ ಸರಕಾರದವರು ವಿವರಣೆಯನ್ನು ಕೊಡಬೇಕು.

ಅಧ್ಯಕ್ಷರು : ಈ ಸಂಸ್ಕರಣ ಸಂಸ್ಥೆ ಏನು ಇದೆ, ಅಲ್ಲಿ ಆಡಳಿತ ಮಂಡಳಿ ರದ್ದು ಆಗಿರುತ್ತದೆ. ಹೀಗೆ ಅಲ್ಲಿ ಆಡಳಿತ ಮಂಡಳಿಯ ಪರವಾಗಿ ಯಾರಾದರೂ ಒಬ್ಬರು ಇರಬೇಕಲ್ಲವೇ?

ಶ್ರೀ ಬಿ. ಮುನಿಯಪ್ಪ : ಅಂಥ ಸಂಸ್ಥೆ ಇಂದ ಚುನಾಯಿತರಿರಬೇಕೆಂದು ಇದ್ದರೂ ಇವರು ನಾಮಿನೇಷನ್ ಮಾಡಿದ್ದಾರೆ. ಚಿಕ್ಕಬಳ್ಳಾಪುರದಲ್ಲಿ ಮೂರು ಜನರನ್ನು ಸರಕಾರದ ಪರವಾಗಿ ನಾಮನಿರ್ದೇಶನ ಮಾಡಿದ್ದರು. ಮತ್ತೆ ನಾಳೆ ಚುನಾವಣೆ ಇರುವಾಗ ಇನ್ನೊಬ್ಬರನ್ನು ನಾಮನಿರ್ದೇಶನ ಮಾಡಿದರು. ಅದು ಯಾವ ಪ್ರಾವಿಷನ್ ಮೂಲಕ ಅಂದರೆ, ಕೃಷಿ ಸಂಸ್ಕರಣ ಸಂಸ್ಥೆಗಳ ಮುಖಾಂತರ ಎಂದು ಹೇಳಿದರು. ಅದು ನಿಜಕ್ಕೂ ಕೆಲಸವನ್ನು ಮಾಡುತ್ತಿಲ್ಲ. ಹೀಗೆ ಕಡೆ ದಿನದಲ್ಲಿ ನಾಮಿನೇಷನ್ ಮಾಡುವುದು ಯಾವ ನಿಯಮದ ಅಡಿಯಲ್ಲಿ? ಅದರ ಬಗ್ಗೆ ಸರಕಾರದವರು ವಿವರಗಳನ್ನು ಕೊಡಬೇಕು.

ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ಇಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮಾರುಕಟ್ಟೆ ಶುಲ್ಕದ ರೂಪದಲ್ಲಿ ವಸೂಲಾದ ಭಾರೀ ಮೊತ್ತದ ಸಾರ್ವಜನಿಕ ನಿಧಿಗಳನ್ನು ಮಾರುಕಟ್ಟೆ ಸಮಿತಿಗಳು ನಿರ್ವಹಿಸುವುದರಿಂದ ವಿವಿಧ ಕಾರ್ಯಚಟುವಟಿಕೆಗಳಿಗೆ ನಿಧಿಯನ್ನು ಸೂಕ್ತ ರೀತಿಯಲ್ಲಿ ಬಳಸುವುದಕ್ಕೆ ರಚನಾತ್ಮಕವಾದಂಥ ಮಾರ್ಗದರ್ಶನ ಮತ್ತು ಜಾಗರೂಕತೆಯ ಅವಶ್ಯಕತೆಯು ಇದೆ ಎಂದು ಹೇಳಿದ್ದಾರೆ. ಅಂದರೆ, ಅಲ್ಲಿ ಚುನಾಯಿತ ಪ್ರತಿನಿಧಿಗಳಿಲ್ಲರೂ ಅಜಾಗರೂಕತೆಯಿಂದ ಇರುವವರು ಮತ್ತು ಅವ್ಯವಹಾರವನ್ನು ಮಾಡುವವರು ಎಂಬ ವಿಚಾರ ಸರಕಾರದಲ್ಲಿದೆಯೇ? ಈ ಸರಕಾರಕ್ಕೆ ಪ್ರಜಾಪ್ರಭುತ್ವದ ಮೇಲೆ ಭರವಸೆ ಇದೆಯೇ? ಈ ರೀತಿಯಲ್ಲಿ ಹೇಳಿಕೆಗಳನ್ನು ಕೊಟ್ಟು ನಾಮಿನೇಷನ್ ಮಾಡುವುದು ತೀರಾ ನಾಚಿಕೆಗೇಡಿತನದ ಸಂಗತಿ ಮತ್ತು ಈ ನೀತಿಯು ಸರಿ ಅಲ್ಲ. ಚುನಾಯಿತ ಪ್ರತಿನಿಧಿಗಳಿಗೆ ಅವಮಾನ ಮಾಡುವ ರೀತಿಯಲ್ಲಿ ಕೊಟ್ಟಿರುವ ಹೇಳಿಕೆಯು ಸರಿಯಲ್ಲ. ಆದ್ದರಿಂದ ಇದನ್ನು ವಾಪಸ್ ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರಕಾರಕ್ಕೆ ಇಷ್ಟೊಂದು ಅಧಿಕಾರದ ದಾಹ ಇದ್ದರೆ ಆಗಿರುವಂಥ ಚುನಾವಣೆಯನ್ನು ರದ್ದು ಮಾಡಲಿ. ಈ ಮೂರು ಜನರ ಜೊತೆಗೆ ಇನ್ನೂ ಹತ್ತು ಜನರನ್ನು ನಾಮಿನೇಷನ್ ಮಾಡಿಸಿಕೊಂಡು ನೀವೇ ನಡೆಸಿಕೊಂಡು ಹೋಗಿ. ರೂಲಿಂಗ್ ಪಾರ್ಟಿಯವರೇ ಎಲ್ಲಾ ಸಂಘಸಂಸ್ಥೆಗಳಲ್ಲಿಯೂ ಇರಬೇಕೆಂದು ಮಾಡಿಕೊಳ್ಳಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ, ನಾವು ಎಲ್ಲಿಗೂ ಬರುವುದಿಲ್ಲ. ನಾವು ನಿಮಗೆ ಯಾವ ಭಾಷೆಯಲ್ಲಿ ಚೀಮಾರಿ ಹಾಕೋಣ? ಇದನ್ನು ನಾವು ಪ್ರತಿಭಟಿಸುತ್ತೇವೆ.

ಅಧ್ಯಕ್ಷರು : ಅವರು ತಮ್ಮ ಉತ್ತರವನ್ನು ಹೇಳಲಿ.

(ಬಿಜೆಪಿ ಪಕ್ಷದ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು)

2.20 ಪಿ.ಎಂ

ಗೊಂದಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ ಇದನ್ನು ಮತಕ್ಕೆ ಹಾಕಿ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಸಾರ್ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇದು ಕೋರ್ಟಿಗೂ ಹೋಗಿತ್ತು. ಇದನ್ನು ಬಾಯಿಮಾತಿನ ಮತಕ್ಕೆ ಹಾಕಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರಲ್ಲೇನು ಸಾಮಾಜಿಕ ನ್ಯಾಯ ಇದೆಯೇನು? ಬೇರೆ ಕಾನೂನುಗಳಲ್ಲಿ ಕ್ಯಾಟಗರಿವೈಸ್ ಏನಾದರೂ ಇದೆ. ಇದರಲ್ಲಿ ಸುಮ್ಮೋಮೊಟೊ ನೂರು ಜನರಿಗೆ ನಾಮಿನೇಷನ್!

ಶ್ರೀ ಡಿ. ಮಂಜುನಾಥ್ : ಎಲ್ಲಾ ಕಡೆ ನಾಮಿನೇಷನ್‌ಗಳಲ್ಲಿ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಪಂಗಡದವರನ್ನು ನಾಮಿನೇಟ್ ಮಾಡಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರನ್ನು ಹಾಕಿಬಿಟ್ಟರೆ ಆಗಿ ಹೋಯಿತಾ? ಹಾಗಾದರೆ ಚುನಾವಣೆ ಮಾಡಬೇಡಿ ಬರೀ ಎಸ್‌ಸಿಎಸ್‌ಟಿ ತುಂಬಿಬಿಡಿರಿ.

ಗೊಂದಲ

ಅಧ್ಯಕ್ಷರು : ನಾನು ಪ್ರೊಸೀಜರ್ ಅನುಸರಿಸುತ್ತೇನೆ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ಅಧ್ಯಕ್ಷರೇ, "1998ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ, (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ"

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ದಯವಿಟ್ಟು ಮತಕ್ಕೆ ಹಾಕಿ.

ಅಧ್ಯಕ್ಷರು : ಆಗಬಹುದು, ಬೆಲ್ ಹಾಕಿರಿ.

ಅಧ್ಯಕ್ಷರು : ಈಗ ಬೆಲ್ಲನ್ನು ನಿಲ್ಲಿಸಲಾಗಿದೆ. ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ :- "1998ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಅಧ್ಯಕ್ಷರು : ವಿಭಜಿಸಿದಾಗ ಫಲಿತಾಂಶ ಹೀಗಿದೆ.

ಹೌದು 57

ಇಲ್ಲ 36

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಶ್ರೀ ವಸಂತ ಬಂಗೇರ (ಸರ್ಕಾರಿ ಮುಖ್ಯ ಸಚೇತಕರು) : ಮಾನ್ಯ ಅಧ್ಯಕ್ಷರೆ, ಎಷ್ಟು ಮಂದಿ ಸದಸ್ಯರು ತಟಸ್ಥರಾಗಿದಾರೆಂಬುದನು ತಿಳಿಸಬೇಕೆಂದು ತಮ್ಮಲಿ ಮನವಿ ಮಾಡಿಕೊಳ್ಳುತ್ತೇನೆ.